ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮನಿಯಮಿತ
ನಂ.16/I, ಮಿಲ್ಲರ್ಸ್‌ಟ್ಯಾಂಕ್ ಬೆಡ್ ಏರಿಯಾ, ಬೆಂಗಳೂರು-560052
Karnataka Food & Civil Supplies Corporation Ltd.
(Government of Karnataka Undertaking)

ಸಂಖ್ಯೆ:ಕಆನಾಸನಿನಿ/ಆಡಳಿತ/ನೇ.ನೇ/746/2025-26/ ದಿನಾಂಕ:31.12.2025

ಪ್ರಕಟಣೆ

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವು ಹಿರಿಯ ಸಹಾಯಕರು, ಹಿರಿಯ ಸಹಾಯಕರು(ಲೆಕ್ಕ), ಗುಣಮಟ್ಟ ನಿರೀಕ್ಷಕರು ಹಾಗೂ ಕಿರಿಯ ಸಹಾಯಕರ ಹುದ್ದೆಯ ನೇಮಕಾತಿ ಸಂಬಂಧ 1:3 ಅಂತಿಮ ಪಟ್ಟಿಯ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಯನ್ನು ದಿನಾಂಕ.27.11.2025 ರಿಂದ 03.12.2025ರವರೆಗೆ ಕೈಗೊಳ್ಳಲಾಗಿದ್ದು, ದಾಖಲಾತಿ ಪರಿಶೀಲನೆಗೆ ಹಾಜರಾಗದ ಅಭ್ಯರ್ಥಿಗಳಿಗೆ ಮತ್ತೊಮ್ಮೆ ದಿನಾಂಕ.19.12.2025 ರಿಂದ 23.12.2025ರವರೆಗೆ ದಾಖಲಾತಿ ಪರಿಶೀಲನೆಯನ್ನು ಕೈಗೊಳ್ಳಲಾಗಿರುತ್ತದೆ. ಆದರೆ, ಕೆಲವು ಅರ್ಹ ಅಭ್ಯರ್ಥಿಗಳು ಮರು ನಿಗದಿಪಡಿಸಿದ ದಿನಾಂಕದಂದು ಸಹ ದಾಖಲಾತಿ ಪರಿಶೀಲನೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ ದಿನಾಂಕ.02.01.2026 ರಿಂದ 05.01.2026 ರೊಳಗಾಗಿ ದಾಖಲಾತಿ ಪರಿಶೀಲನೆಯ ದಿನಾಂಕವನ್ನು ಮತ್ತೊಮ್ಮೆ ಮರು ನಿಗಧಿಪಡಿಸಲಾಗಿರುತ್ತದೆ. ಮರು ನಿಗದಿಪಡಿಸಲಾದ ದಿನಾಂಕದಂದು ಕೇಂದ್ರ ಕಛೇರಿ, ನಂ.16/I, ಮಿಲ್ಲರ್ಸ್‌ಟ್ಯಾಂಕ್ ಬೆಡ್ ಏರಿಯಾ, ಬೆಂಗಳೂರು-560052 ಇಲ್ಲಿ 10:30 ರಿಂದ 5:30 ರೊಳಗಾಗಿ ಖುದ್ದಾಗಿ ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಲು ತಿಳಿಸಿದೆ. ಇದು ಅಂತಿಮ ಕರೆಯಾಗಿದ್ದು, ಮರು ನಿಗದಿಪಡಿಸಲಾದ ದಿನಾಂಕದಂದು ಹಾಜರಾಗದ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು ಹಾಗೂ ಹುದ್ದೆಗಳನ್ನು ದಾಖಲಾತಿ ಪರಿಶೀಲನೆಗೆ ಹಾಜರಾಗಿರುವ 1:3 ಅಂತಿಮ ಪಟ್ಟಿಯ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲು ನಿಗಮವು ಕ್ರಮ ಕೈಗೊಳ್ಳುತ್ತದೆ ಎಂದು ಈ ಮೂಲಕ ಸ್ಪಷ್ಟಪಡಿಸಿದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

For more job news visit : www.kpscvaani.com